**ಜನ್ಮಸ್ಥಳ – ಚಿಕ್ಕೋಡಿ**

**ಪೂರ್ವಾಶ್ರಮನಾಮ : ಸೇತೂರಾಮಚಾರ್ಯ ಕೊರ್ಲಹಳ್ಳಿ**

**ಕೊರ್ಲಹಳ್ಳಿ ಘರಾನಾದಿಂದ 3 ಜನ ಪೀಠಾಧಿಪತಿಗಳಾಗಿದ್ದಾರೆ.**

**ತಂದೆ–ಜಯರಾಮಾಚಾರ್ಯ ಕೊರ್ಲಹಳ್ಳಿ (ಸತ್ಯಧೀರ ತೀರ್ಥರು)**

**ತಾಯಿ – ಕೃಷ್ಣಾಬಾಯಿ**

**ಆರಂಭಿಕ ವಿದ್ಯಾಭ್ಯಾಸ – ತಂದೆ ಜಯರಾಮಾಚಾರ್ಯರಿಂದ**

**ವಿವಾಹ – ೧೬ನೇ ವಯಸ್ಸಿನಲ್ಲಿ ಸಾವಿತ್ರಿಬಾಯಿಯೊಂದಿಗೆ.**

**ಆಶ್ರಮ ಗುರುಗಳು– ಶ್ರೀಸತ್ಯಜ್ಞಾನತೀರ್ಥರು (ರಾಜಮಹೇಂದ್ರಿ)**

**ಆಶ್ರಮಶಿಷ್ಯರು – ಶ್ರೀಸತ್ಯಪ್ರಜ್ಞತೀರ್ಥರು (ಆತಕೂರು)**

ಶ್ರೀಪಾದಂಗಳವರ ದಿಗ್ವಿಜಯ ಯಾತ್ರೆ :

೧. ಕಾಶಿಗೆ ಹೋಗುತ್ತಿದ್ದ ದಾರಿಯಲ್ಲಿ ಅಕ್ಷಯವಾಟಿಕ ಎಂಬ ಸ್ಥಳದಲ್ಲಿ ಶ್ರೀಚಂದ್ರಶೇಖರ ಭಟ್ಟನೆಂಬ ಪ್ರಸಿದ್ಧ ಅಧ್ವೈತಿ ಪಂಡಿತನ ಆಹ್ವಾನವನ್ನು ಮನ್ನಿಸಿ, ವಾಗ್ವಾದ ಮಾಡಿ ಸೋಲಿಸಿದರು. ಮತ್ತು ಹಲವು ಅದ್ವೈತ ಪಂಡಿತರನ್ನು ಸೋಲಿಸಿ ಅವರನ್ನು ಮಧ್ವಮತ ಅನುಯಾಯಿಗಳಾಗಿ ಮಾಡಿದರು.

೨. ರೇವಾ ಎಂಬ ನಗರದಲ್ಲಿ ಅಲ್ಲಿನ ಸಂಸ್ಥಾನದ ರಾಜನ ಆಹ್ವಾನದ ಮೇರೆಗೆ ಹೋಗಿ ಅಲ್ಲಿ ಶ್ರೀಮೂಲರಾಮದೇವರನ್ನು ಪೂಜಿಸಿದರು.

೩. ಮದ್ರಾಸ್ ನಗರಕ್ಕೆ ಬಂದು ಅಲ್ಲಿ ಮಹಾಮಹೋಪಾದ್ಯಾಯ ಹರಿಶಾಸ್ತ್ರಿ ಎಂಬುವರ ಜೊತೆ ಮೂರು ದಿನ ವಾಖ್ಯಾರ್ಥ ಮಾಡಿ ಸೋಲಿಸಿದರು.

೪. **"ಮುಕ್ತಿಯಲ್ಲಿ ತಾರತಮ್ಯ ಇದೆಯಾ?"** – ಈ ವಿಷಯವಾಗಿ ಕುಂಭಕೋಣಂನಲ್ಲಿ ಪ್ರಸಿದ್ಧ ಶ್ರೀವೈಷ್ಣವ ಪಂಡಿತರಾಗಿದ್ದ ಚತುಶಾಸ್ತ್ರ ಕಲ್ಪತರು ಶೇಷಾಚಾರ್ಯ ಎಂಬುವರ ಜೊತೆ ವಾಗ್ವಾದ ಮಾಡಿ ಮುಕ್ತಿಯಲ್ಲೂ ತಾರತಮ್ಯ ಇದೆಯೆಂದು ನಿರೂಪಿಸಿದರು.

೫. **ಬಾಲಗಂಗಾಧರ ತಿಲಕರ ಜೊತೆ ವಾಗ್ವಾದ/ಚರ್ಚೆ** – ಬಾಲಗಂಗಾಧರ ತಿಲಕರು 1916ರಲ್ಲಿ ಜೈಲಿನಲ್ಲಿದ್ದಾಗ **"ಗೀತಾ ರಹಸ್ಯಂ"** ಎಂಬ ಪುಸ್ತಕವನ್ನು ಬರೆದಿದ್ದರು. ಅದರಲ್ಲಿ ಶ್ರೀಮದಾಚಾರ್ಯರ ತತ್ತ್ವ ಮತ್ತು ಗೀತಾಭಾಷ್ಯದ ಬಗ್ಗೆ ಕೆಲವು ಅನುಮಾನಗಳನ್ನು ಬರೆದಿದ್ದರು. ಈ ವಿಷಯವನ್ನು ತಮ್ಮ ಶಿಷ್ಯರಿಂದ ತಿಳಿದ ಶ್ರೀಗಳವರು ತಿಲಕರಿಗೆ ಒಂದು ಪತ್ರವನ್ನು ಬರೆದು ತಮ್ಮನ್ನು ಭೇಟಿಯಾಗುವಂತೆ ಹೇಳಿದರು. ಆಗ ತಿಲಕರು ತಾವು ಚಿಕ್ಕೋಡಿಗೆ ಬಂದು ಭೇಟಿಯಾಗುವುದಾಗಿ ಹೇಳಿ ಕಳುಹಿಸಿದರು. ಮತ್ತು ಚಿಕ್ಕೋಡಿಗೆ ಬಂದು ಶ್ರೀಗಳವರನ್ನು ಭೇಟಿಮಾಡಿ ನಮಸ್ಕರಿಸಿ ಶ್ರೀಗಳವರ ಜೊತೆ ನಾಲ್ಕು ದಿನ ಚರ್ಚೆ ಮಾಡಿದರು. ಶ್ರೀಗಳವರು ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಯುದ್ಧಭೂಮಿಯಲ್ಲಿ

ಗೀತೋಪದೇಶವನ್ನು ಮಾಡಿದುದರ ಔಚಿತ್ಯವನ್ನು ವಿವರಿಸಿದರು. ಅಲ್ಲಿ ಶ್ರೀಕೃಷ್ಣನು ಉಪದೇಶ ಮಾಡಲು ಕಪಿರಾಜ ಹನುಮಂತನು ಅರ್ಜುನನ ಧ್ವಜದಲ್ಲಿದ್ದುದೇ ಮುಖ್ಯ ಕಾರಣ ಮತ್ತು ಆ ಹನುಮಂತನೇ ನಮ್ಮ ಶ್ರೀಮಧ್ವಾಚಾರ್ಯರು ಎಂದು ಪ್ರಮಾಣ

೬. ಪುರಸ್ಸರವಾಗಿ ವರ್ಣಿಸಲು, ಶ್ರೀಗಳವರ ವಾಗ್ವೈಖರಿಗೆ ಸೋತ ಬಾಲಗಂಗಾಧರತಿಲಕರು ಶ್ರೀಗಳವರನ್ನು ಪುಣೆಗೆ ಮತ್ತೊಮ್ಮೆ ವಾಗ್ವಾದಕ್ಕೆ ಬರುವಂತೆ ಕೋರಿದರು.

ಪುಣೆಗೆ ಬಂದ ಮೇಲೆ ಶ್ರೀಗಳವರನ್ನು ರಾಮೇಶ್ವರಮಂದಿರದಿಂದ ತುಲಸೀಭಾಗ್ ರಾಮ ಮಂದಿರದವರೆಗೆ ಮೆರವಣಿಗೆಯಲ್ಲಿ ಕರೆದೊಯ್ದು ತಿಲಕರು ಪ್ರತಿದಿನ, ಅವರ ಕೂಡ ಹಲವಾರು ವಿಷಯಗಳನ್ನು ಚರ್ಚಿಸಿದರು. ಈ ಸತ್ಯಧ್ಯಾನತೀರ್ಥರ – ತಿಲಕರ ಸಂಭಾಷಣೆಯನ್ನು ತಿಲಕರಿಗೆ ಮರಾಠಿಯಲ್ಲಿ ದಾದಾಚಾರ್ಯ ಕಾಲೆಯವರು ಅನುವಾದಿಸುತ್ತಿದ್ದರು. ಧರ್ಮ, ಧಾರ್ಮಿಕತೆ, ವೇದ, ಉಪನಿಷತ್, ದೈನಂದಿನ ಕರ್ಮ–ಕರ್ತವ್ಯಗಳನ್ನು ಚರ್ಚಿಸಿ ತಿಳಿದುಕೊಂಡ ತಿಲಕರು ಬಹಳ ಸಂತೋಷಗೊಂಡರು. ಅವರಿಬ್ಬರ ನಡುವ ನಡೆದ ಮತ್ತು ಸತ್ಯಧ್ಯಾನರ ದಿಗ್ವಿಜಯವನ್ನು ಆಗಿನ ಕಾಲದ ಪತ್ರಿಕೆ “ಮಾಧ್ವ ಸಿದ್ಧಾಂತ ಸುಧಾಕರದಲ್ಲಿ” ಪ್ರಕಟಗೊಳ್ಳುತ್ತಿದ್ದವು.

ಒಂದು ಜ್ಯೇಷ್ಟಕೃಷ್ಣ ದ್ವಿತೀಯ ಗುರುವಾರದಂದು ಶ್ರೀ ಬಾಲಗಂಗಾಧರ ತಿಲಕರು ಶ್ರೀಗಳವರಿಗೆ ಪುಣೆಯಲ್ಲಿ ಭಾರೀ ಪ್ರಚಾರದೊಂದಿಗೆ ಭಿಕ್ಷೆಯನ್ನು ಏರ್ಪಡಿಸಿ, ತಮ್ಮ “ಕೇಸರಿ” ಪತ್ರಿಕೆಯಲ್ಲಿ ಹೆಚ್ಚು ಪ್ರಚಾರವನ್ನು ಕೊಟ್ಟು

ತಾವೂ (ತಿಲಕರು) ಅಂಗಾರ ಅಕ್ಷತೆಯನ್ನು ಹಚ್ಚಿಕೊಂಡು ಅದನ್ನು ತಮ್ಮ ಪತ್ರಿಕಯ ಮುಖಪುಟದಲ್ಲಿ ಫೋಟೋವನ್ನೂ ಸಹ ಹಾಕಿಸಿದ್ದರು.

೭. ಸತ್ಯಧ್ಯಾನರ ವಿದ್ಯಾವೈಖರಿ – ಇವರು ನ್ಯಾಯ, ವ್ಯಾಕರಣ, ಮೀಮಾಂಸ, ವೇದಾಂತ, ಶ್ರೀಮದಾಚಾರ್ಯರ ತತ್ತ್ವ, ಚೆನ್ನಾಗಿ ತಿಳಿದಿದ್ದರು. ಇವರು ಅನ್ಯಮತಗಳಾದ ಅದ್ವೈತ, ವಿಶಿಷ್ಟಾದ್ವೈತ ಮುಂತಾದ ತತ್ತ್ವಗಳನ್ನು ಚೆನ್ನಾಗಿ ಓದಿ ವ್ಯವಸಾಯ ಮಾಡಿ ಮಧ್ವಶಾಸ್ತ್ರದ ವಾಕ್ಯದ ಮೂಲಕ ಅವುಗಳನ್ನು ಖಂಡಿಸುತ್ತಿದ್ದರು


೮. ನಂತರ ಶ್ರೀಗಳವರು ಸಾಂಗ್ಲಿ, ಮೀರಜ್, ಕೊಲ್ಹಾಪುರ, ಸತಾರ, ಬಿಜಾಪುರ ಮುಂತಾದ ಹಲವು ಮುಂತಾದ ಸ್ಥಳಗಳಲ್ಲಿ ಸಂಚರಿಸಿ, ಅಲ್ಲೆಲ್ಲಾ ಮುದ್ರಾಧಾರಣೆ, ಮೂಲರಾಮರ ಪೂಜೆ ನಡೆಸಿದರು.

## ಶ್ರೀಸತ್ಯಧ್ಯಾನರ ಶಿಷ್ಯ-ಪ್ರಶಿಷ್ಯರು –

೧. ಶ್ರೀವಿದ್ಯಾಮಾನ್ಯಶ್ರೀಪಾದಂಗಳವರು, ಭಂಡಾರಕೇರಿ ಮಠ
೨. ಶ್ರೀಲಕ್ಷ್ಮೀಶತೀರ್ಥರು (ಕುಂದಾಪುರ ವ್ಯಾಸರಾಜಮಠ)
೩. ಶ್ರೀವಿದ್ಯಾಸಿಂಧುತೀರ್ಥರು (ಸುಬ್ರಮಣ್ಯ ಮಠ)
೪. ಶ್ರೀಲಕ್ಷ್ಮೀಂದ್ರತೀರ್ಥರು (ಶಿರೂರು ಮಠ)
೫. ಶ್ರೀಸಾಗರಕಟ್ಟೆ ಪ್ರದ್ಯುಮ್ನತೀರ್ಥರು
೬. ಶ್ರೀಕೂಡ್ಲಿ ಅಕ್ಷೋಭ್ಯತೀರ್ಥ ಮಠದ ಪೀಠಾಧಿಪತಿಗಳು
೭. ಜಾಲೀಹಾಳ್ ಶ್ರೀನಿವಾಸಾಚಾರ್ಯರು, ದಾದಾಚಾರ್ಯ ಕಾಲೆ, ಗುತ್ತಲ್ ರಂಗಾಚಾರ್ಯರು,
೮. ಕಿನ್ಹಾಳ್‌ಗಂಗೂರು ಜಯಾಚಾರ್ಯರು (ನಂತರದ ದಿನಗಳಲ್ಲಿ ಶ್ರೀಸತ್ಯಜ್ಞಾನತೀರ್ಥರಾದರು)
೯. ಪಾಂಡುರಂಗಿ ಕೃಷ್ಣಾಚಾರ್ಯ, ವರಖೇಡಿ ಪ್ರದ್ಯುಮ್ನಾಚಾರ್ಯ, ವರಖೇಡಿ ನರಸಿಂಹಾಚಾರ್ಯ,

೧೦. ಮಳಗಿ ವೇದವ್ಯಾಸಾಚಾರ್ಯ, ಸುಬ್ಬಣ್ಣಾಚಾರ್ಯ ಗಲಗಲಿ, ರಾಮಾಚಾರ್ಯ ಗಲಗಲಿ,

೧೧. ಯಜ್ಞ ವಿಠಲಾಚಾರ್ಯ, ಚಿಂಚೋಳಿ ಕೃಷ್ಣಾಚಾರ್ಯ, ಮಾಹುಲಿ ಗೋಪಾಲಾಚಾರ್ಯ






ಈ ರೀತಿ ನೂರಾರು ಪಂಡಿತರು ಇವರ ಶಿಷ್ಯತ್ವವನ್ನು ಪಡೆದರು.

**ಚಂದ್ರಿಕಾ ಮಂಡನಮ್** – ಶ್ರೀಟೀಕಾರಾಯರ ಕ್ಷೇತ್ರವಾದ ಮಲಖೇಡದಲ್ಲಿ ಸುಧಾ ಮಂಗಳ ಮುಗಿಸಿ, ತಮ್ಮ ಚಾತುರ್ಮಾಸ್ಯಕ್ಕಾಗಿ, ಅಲ್ಲಿಂದ ರಾಯಚೂರಿಗೆ ತೆರಳಿದ ಶ್ರೀಗಳವರು, ಅಲ್ಲಿಂದ ಮುಂದೆ ಹೊರಟು "ಕುಂಟರ್ಗಿ" ಎಂಬ ಸ್ಥಳವನ್ನು ತಲುಪಿದರು. ಅಲ್ಲಿ ಒಮ್ಮೆ ಶ್ರೀಗಳವರಿಗೆ ರಿಜಿಸ್ಟರ್ಡ್ ಅಂಚೆ ಮೂಲಕ ಒಂದು ಪುಸ್ತಕ ತಲುಪಿತು. ಆ ಪುಸ್ತಕವನ್ನು ಕಳುಹಿಸಿದ್ದವರು ಪ್ರಸಿದ್ಧ ಅದ್ವೈತ ಪಂಡಿತರಾದ ಕುಂಭಕೋಣದ ಶ್ರೀ ರಾಮಸುಬ್ಬಾಶಾಸ್ತ್ರಿಗಳು. ಪುಸ್ತಕದ ಹೆಸರು "ಚಂದಿಕಾ ಖಂಡನಮ್". ಇದು ಪ್ರಸಿದ್ಧ ಶ್ರೀವ್ಯಾಸರಾಜರ ತಾತ್ಪರ್ಯ ಚಂದ್ರಿಕಾ ಗ್ರಂಥಕ್ಕೆ ಖಂಡನ. ಶ್ರೀಗಳವರು ಸ್ನಾನ–ಆಹ್ನೀಕಕ್ಕೆ ಹೊರಟವರು, ಎಲ್ಲಾ ನಿಲ್ಲಿಸಿ, ಇಡೀ "ಚಂದ್ರಿಕಾಖಂಡನಮ್" ಗ್ರಂಥವನ್ನು ಓದಿದರು. ಅದರಲ್ಲಿರುವ ಆಕ್ಷೇಪಗಳಿಗೆಲ್ಲ ಉತ್ತರಿಸಲು ತಕ್ಷಣ ಆರಂಭಿಸಿಯೇ, ತಮ್ಮ ಸ್ನಾನಕ್ಕೆ ಹೊರಟರು. ಸ್ನಾನ–ಪೂಜೆ–ತೀರ್ಥಪ್ರಸಾದಾದ ನಂತರ ಮತ್ತೆ ಖಂಡನಕ್ಕೆ ಮಂಡನ ಆರಂಭಿಸಿದರು. ಈರೀತಿ ಕೆಲವೇ ದಿನಗಳಲ್ಲಿ ಅದಕ್ಕೆ ಸಂಪೂರ್ಣ ಉತ್ತರವನ್ನು ಬರೆದು ಆ ಗ್ರಂಥಕ್ಕೆ **"ಚಂದ್ರಿಕ ಮಂಡನಮ್"**ಎಂದು ಹೆಸರಿಸಿ, ಅದರ ಪ್ರತಿಯನ್ನು ಶ್ರೀರಾಮಸುಬ್ಬಾಶಾಸ್ತ್ರಿಗಳಿಗೆ ಕಳುಹಿಸಿದರು. ಆದರೆ ಅಲ್ಲಿಂದ ಯಾವುದೇ ಉತ್ತರ ಬರದಿದ್ದುದನ್ನು ನೋಡಿ, ಶ್ರೀಗಳು ಕೊಕ್ಕೂರು ರಾಮಚಂದ್ರರಾವ್ ಎಂಬ ಮದ್ರಾಸ್ ಹೈ

ಕೋರ್ಟಿನ ವಕೀಲರು, ಮತ್ತು ಭೀಮಾಚಾರ್ಯ ಪಾಂಡುರಂಗಿಯವರನ್ನು ಕುಂಭಕೋಣಕ್ಕೆ ಕಳುಹಿಸಿ, ಶ್ರೀರಾಮಸುಬ್ಬಾಶಾಸ್ತ್ರಿಗಳವರನ್ನು ಕರೆದುಕೊಂಡು ತಿರುಚಾನೂರಿಗೆ ಬರುವಂತೆ ಹೇಳಿ ಕಳುಹಿದರು. ಇದಕ್ಕೆ ಶಾಸ್ತ್ರಿಯವರು ತಮಗೆ ವಯಸ್ಸಾಗಿದೆ ಬರಲಾಗುವುದಿಲ್ಲವೆನ್ನಲು, ಅವರನ್ನು ಸುರಕ್ಷಿತವಾಗಿ ಕರೆದುಕೊಂಡು ಬರಲು ಸಕಲ ಸವಲತ್ತುಗಳುಳ್ಳ ವಾಹನವನ್ನು ಏರ್ಪಾಡು ಮಾಡುವುದಾಗಿ ಹೇಳಿದರು. ಆಗಲೂ ಆ ಶಾಸ್ತ್ರಿಗಳು ಒಪ್ಪಲಿಲ್ಲ. ಕೊನೆಗೆ ಶ್ರೀಗಳವರು ತಾವೇ ಖುದ್ದಾಗಿ ಅಲ್ಲಿಗೇ ಬಂದು ವಾಖ್ಯಾರ್ಥ ಮಾಡುವುದಾಗಿ ಹೇಳಿದರೆ, ತಾವು ಸನ್ಯಾಸಿಗಳೊಂದಿಗೆ ಮಾತನಾಡುವುದಿಲ್ಲವೆಂದು ಶಾಸ್ತ್ರಿಗಳು ಜಾರಿಕೊಂಡರು.

ಆಗ ಶ್ರೀಗಳು ತಿರುಚಾನೂರಿನಲ್ಲಿ ಒಂದು ದೊಡ್ಡ ವಿದ್ವತ್ ಸಭಾವನ್ನು ವ್ಯವಸ್ಥೆ ಮಾಡಿ, ಅಲ್ಲೇ ಆ ಚಂದ್ರಿಕಾ ಮಂಡನಮ್ ಗ್ರಂಥವನ್ನು ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಮಾಡಿದರು. ಆ ಸಭೆಗೆ ನಾರಾಯಣಶಾಸ್ತ್ರಿಯೆಂಬ ಅದ್ವೈತಿ ಪಂಡಿತನನ್ನೂ, ಗೋಪಾಲಾಚಾರ್ಯ ಎಂಬ ವಿಶಿಷ್ಟಾದ್ವೈತ ಪಂಡಿತರನ್ನೂ ಆಮಂತ್ರಣ ನೀಡಿದರು. ಬೆಳಿಗ್ಗೆ ೭ಕ್ಕೆ ಆರಂಭವಾದ ಆ ಸಭಾದಲ್ಲಿ ಸಾವಿರಾರು ಮಂದಿ ಭಾಗವಹಿಸಿದರು.

**ಶ್ರೀಗಳವರು ಚಂದ್ರಿಕಾಮಂಡನಮ್ ಅನ್ನು ವಿವರಿಸಿದ್ದು ಹೀಗೆ –**

ರಾಮಸುಬ್ಬಾಶಾಸ್ತ್ರಿಗಳ ಚಂದ್ರಿಕಾಖಂಡನಮ್ ಗ್ರಂಥದಲ್ಲಿ ಎರಡು ಭಾಗ – ಒಂದರಲ್ಲಿ ಅದ್ವೈತವನ್ನು ಮಂಡಿಸಿ, ಇನ್ನೊಂದರಲ್ಲಿ ಚಂದ್ರಿಕಾವನ್ನು ಖಂಡಿಸಿದ್ದಾರೆ. ಆದರೆ ಪರಮಪೂಜ್ಯ ಶ್ರೀಸತ್ಯಧ್ಯಾನರ ಚಂದ್ರಿಕಾಮಂಡನಮ್ ಗ್ರಂಥದಲ್ಲಿ ಮೂರು ಭಾಗಗಳಿವೆ.

ಒಂದರಲ್ಲಿ ಅದ್ವೈತಕ್ಕೆ ಶ್ರುತಿ-ಸ್ಮೃತಿಗಳ ಯಾವುದೇ ಆಧಾರವಿಲ್ಲವೆಂದು ನಿರೂಪಿಸಿದ್ದಾರೆ. ಅದ್ವೈತ – ಜೀವ-ಬ್ರಹ್ಮರಲ್ಲಿ ಐಕ್ಯವನ್ನು ಹೇಳುತ್ತದೆ. ತತ್ತ್ವಮಸಿ, ಅಹಂಬ್ರಹ್ಮಾಸ್ಮಿ ಮುಂತಾದ ಉಪನಿಷತ್ ವಾಕ್ಯಗಳನ್ನು ಅದ್ವೈತ ತಪ್ಪಾಗಿ ಅರ್ಥೈಸಿದೆ. ಆದರೆ ನಮ್ಮ ಶ್ರೀಮದಾಚಾರ್ಯರ ತತ್ತ್ವದಲ್ಲಿ ಜೀವ-ಜೀವ ಭೇದ, ಜೀವ-ಜಡಭೇದ, ಜಡ-ಜಡಭೇದ, ಜೀವ-ಈಶ ಭೇದ, ಜಡ-ಈಶ ಭೇದ ಮುಂತಾದವನ್ನು ವಿವರಿಸಿ ಅದ್ವೈತವನ್ನು ನಿರಾಕರಿಸಿದ್ದಾರೆ.

ಎರಡನೇ ಭಾಗದಲ್ಲಿ ಶಾಸ್ತ್ರಿಗಳು ನೀಡಿರುವ ಖಂಡನಗಳನ್ನು ವಿವರಿಸಿದ್ದಾರೆ. ಮೂರನೇಯದರಲ್ಲಿ ವ್ಯಾಸರಾಜರ ಚಂದ್ರಿಕಾ ಗ್ರಂಥದಲ್ಲಿ ಏನೇನಿದೆ, ಅದು ಏತಕ್ಕೆ ಸರಿಯಾಗಿದೆ,

ಮತ್ತು ಅವರ ಖಂಡನ ವಾಕ್ಯಗಳಿಗೆಲ್ಲ ಖಂಡನ ಮಾಡಿ ತಾತ್ಪರ್ಯಚಂದ್ರಿಕಾವನ್ನು ಎತ್ತಿ ಹಿಡಿದಿದ್ದಾರೆ, ಮತ್ತು ತಾತ್ಪರ್ಯಚಂದ್ರಿಕಾದ ವೈಶಿಷ್ಟ್ಯವೇನೆಂಬುದನ್ನು ನಿರೂಪಿಸಿದ್ದಾರೆ.

ಆ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚೆಯಾಯಿತು :

೧. ತತ್ತ್ವಮಸಿ. ೨. ಅಹಂಬ್ರಹ್ಮಾಸ್ಮಿ, ೩. ನೇಹನಾ ನಾಸ್ತಿಕಿಂಚನ,
೪. ಏಕತ್ವಮನುಪಶ್ಯತ: ೫. ಆತ್ಮವೇದಮ್ ಸರ್ವಂ, ಮುಂತಾದುವುಗಳು.

ಈ ರೀತಿಯಾಗಿ ಮಹಾಸಮಾರಾಧನೆಯನ್ನು ತಿರುಚಾನೂರಿನಲ್ಲಿ ನಡೆಸಿ, ಮುಂದೆ ಚಿತ್ತೂರು, ಮದನಪಲ್ಲಿ, ಪುಂಗನೂರು, ಕೋಲಾರ ಸಂದರ್ಶಿಸಿ, ಬೆಂಗಳೂರು ತಲುಪಿದರು. ಇದೇ ರೀತಿ ಮೈಸೂರು ತಲುಪಿ ಮೈಸೂರಿನ ರಾಜನ ಅದ್ದೂರಿ ಸ್ವಾಗತದೊಂದಿಗೆ, ಅಲ್ಲೇ ಚಾತುಮಾಸ್ಯವನ್ನು ಕೃ.ಶ.೧೯೩೦ರಲ್ಲಿ ಆಚರಿಸಿದರು. ಮೈಸೂರಿನಲ್ಲಿ ಒಂದು ದೊಡ್ಡ ಸಭಾವನ್ನು 22.9.1930ರಂದು ಏರ್ಪಡಿಸಿದರು. ಆ ಸಭೆಯಲ್ಲಿ ಬಂದಿದ್ದ ಕೆಲವು ಪ್ರಸಿದ್ಧ ಪಂಡಿತರುಗಳು – ರಾಮಶೇಷಶಾಸ್ತ್ರಿ, ಸಾಂಬಶಾಸ್ತ್ರಿ, ಸಿದ್ಧಾಂತಿ ತಿಮ್ಮಣ್ಣ ಶಾಸ್ತ್ರಿ, ಮಹಮಾಹೋಪಾಧ್ಯಾಯ ವಿರೂಪಾಕ್ಷ ಶಾಸ್ತ್ರಿ, ವೆಂಕಟಕೃಷ್ಣಯ್ಯ, ಮುಂತಾದವರು. ಇವರುಗಳ ಸಮಕ್ಷಮದಲ್ಲಿ ಮಂಡಿಸಲಾದ ನಿರ್ಣಯಗಳು –

ಅ ) ಅದ್ವೈತಮತ ಅವೈಧಿಕ ಮತ


ಆ) ಈ ನಿರ್ಣಯವನ್ನು ಅದ್ವೈತ ಪೀಠಾಧಿಪತಿಗಳಿಗೆಲ್ಲ ತಿಳಿಸುವುದು. ಅವರು ಒಂದು ಸಭಾ ಕರೆದು ಸಾಧ್ಯವಿದ್ದರೆ ತಮ್ಮ ಮುಂದೆ ಅದ್ವೈತಮತವು ವೈಧಿಕಮತವೆಂದು ನಿರೂಪಿಸಲಿ.

ಇ) ಈ ನಿರ್ಣಯವನ್ನು ಎಲ್ಲ ಪ್ರಸಿದ್ಧ ಪತ್ರಿಕೆಗಳಲ್ಲೂ ಪ್ರಚಾರಮಾಡಲಾಯಿತು.

ಇದಾದ ಕೆಲವೇ ತಿಂಗಳುಗಳಲ್ಲಿ ಹಲವಾರು ಅದ್ವೈತ ಪಂಡಿತರುಗಳು ದ್ವೈತವನ್ನು ಒಪ್ಪಿ ಮಧ್ವಮತವನ್ನು ಅನುಸರಿಸಿದರು. ಆದ್ದರಿಂದಲೇ ಶ್ರೀ ಸತ್ಯಧ್ಯಾನರನ್ನು "ರಾಕ್ಷಸ ದ್ವೈತಪಂಡಿತ" ಎಂದು ಕರೆಯುತ್ತಿದ್ದರು.

## ಶ್ರೀಸತ್ಯಧ್ಯಾನರ ಗ್ರಂಥಗಳು –

೧. ಸಭಾಸಾರ ಸಂಗ್ರಹ (ಕನ್ನಡ)
೨. ಗೀತೋಪನ್ಯಾಸಗಳು (ಕನ್ನಡ)
೩. ಗೀತ ಸಾರಸಂಗ್ರಹ
೪. ಗೀತ ಪ್ರತಿಪದಾರ್ಥ ಚಂದ್ರಿಕ
೫. ಚಂದ್ರಿಕಾ ಮಂಡನಮ್






**Source – KALE BALAKRISHNA**
(HE IS THE GRAND SON OF DAADACHAARYA KALE, WHO STUDIED UNDER SRI SATYADHYANARU). FOR FURTHER DETAILS ON SATHYADHYANA SHREEPADANGALAVAU, ONE CAN VISIT http://kalebala.wordpress.com/